# ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 146 ಎಎಸ್‌ಡಿ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:14.06.2013.

## ಸುತ್ತೋಲೆ

ವಿಷಯ: ಅನಧಿಕೃತ ನಿವೇಶನ/ಬಡಾವಣೆಗಳ ರಚನೆ/ನೋಂದಣಿಯನ್ನು ತಡೆಗಟ್ಟುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆರವರ ಅರೆ ಸರ್ಕಾರಿ ಪತ್ರ ಸಂಖ್ಯೆ:ಯುಡಿಡಿ 354 ಎಂಎನ್‌ವೈ 2008 ದಿನಾಂಕ:31.12.2012.

2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ದಿನಾಂಕ:20.03.2013 ಹಾಗೂ 30.03.2013 ರಂದು ತೆಗೆದುಕೊಂಡ ಸಭೆಯ ನಿರ್ಧಾರ.

* * *

ಕೃಷಿ ಭೂಮಿಯನ್ನು ಗ್ರಾಮಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಗ್ರಾಮಠಾಣಾ ನಿವೇಶನಗಳೆಂದು ಬಿಂಬಿಸಿ ಪಂಚಾಯತ್ ಅಭಿವೃಧ್ಧಿ ಅಧಿಕಾರಿಗಳಿಂದ ಫಾರಂ–9ನ್ನು ಪಡೆಯಲಾಗುತ್ತಿದೆ. ವಾಸ್ತವವಾಗಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಗ್ರಾಮಠಾಣ ಪ್ರದೇಶಗಳ ಆರಂಭ ಹಾಗೂ ಅಂತ್ಯಗಳ ಬಗ್ಗೆ ನಿಖರವಾಗಿ ಸರ್ವೆ ಮಾಡದ ಕಾರಣ ಗ್ರಾಮಠಾಣಾ ಪ್ರದೇಶವನ್ನು ನಿರ್ಧಿಷ್ಟವಾಗಿ ಗುರುತಿಸುವುದು ಕಷ್ಟಸಾಧ್ಯವಾಗಿದೆ. ಗ್ರಾಮಠಾಣಾ ಪ್ರದೇಶವೆಂದು ಹೇಳಿಕೊಂಡು ಫಾರಂ–9ನ್ನು ನೀಡುವಂತೆ ಕೋರಿಕೆಗಳು ಬಂದಾಗ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸದರಿ ಭೂಮಿಯು ನಿಜಕ್ಕೂ ಗ್ರಾಮಠಾಣಾ ಪ್ರದೇಶವೇ ಎಂಬುದನ್ನು ದೃಢಪಡಿಸಿಕೊಳ್ಳುವುದು ಅವಶ್ಯಕ.

ಈ ನಿಟ್ಟನಲ್ಲಿ ಗ್ರಾಮ ಪಂಚಾಯ್ತಿಗಳಲ್ಲಿ ಸರ್ವೆ ಸಿಬ್ಬಂದಿ ಇಲ್ಲದಿರುವ ಕಾರಣ ಪ್ರಶ್ನಿತ ಜಮೀನು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತದೆಯೇ ಅಥವಾ ಅದು ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುತ್ತದೆಯೇ ಎಂಬುದನ್ನು ದೃಢಪಡಿಸಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ. ಈ ಕಾರಣಕ್ಕಾಗಿ ಇನ್ನು ಮುಂದೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಂದ ಫಾರಂ ನಂ.9 ಕ್ಕೆ ಸಂಬಂಧಿಸಿದಂತೆ ಗ್ರಾಮಠಾಣಾ ಪ್ರದೇಶವನ್ನು ದೃಢೀಕರಿಸುವ ಪ್ರಶ್ನೆ ಬಂದಾಗ ತಹಶೀಲ್ದಾರರುಗಳ ಆ ಪ್ರದೇಶವನ್ನು ಸರ್ವೆ ಮಾಡಿಸಿ ತದನಂತರ ಆ ಪ್ರದೇಶವು ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ದೃಢೀಕರಿಸಿದ ನಂತರವೇ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಫಾರಂ–9ನ್ನು ನೀಡತಕ್ಕದ್ದು.

ಮೇಲೆ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಇನ್ನು ಮುಂದೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಎಲ್ಲಾ ತಾಲ್ಲೂಕು ತಹಶೀಲ್ದಾರರುಗಳು ನಿಗದಿಪಡಿಸಲಾದ ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸತಕ್ಕದ್ದು. ಸದರಿ ಸುತ್ತೋಲೆಯಲ್ಲಿನ ಸೂಚನೆಗಳನ್ನು ಉಲ್ಲಂಘಿಸಿದ